

ಪತ್ನಿ ಸುಚೇತಾ ಜೋಶಿ ಜೊತೆ ಎಂ.ಪ್ರಭಾಕರ ಜೋಶಿ

ಶ್ರೀಲಂಕಾ, ಚೀನಾ, ಬರ್ಮಾ, ನೇಪಾಳದಲ್ಲಿಯೂ ಇರುವ ಕಲಾಪ್ರಕಾರಗಳೂ ಸೇರಿದಂತೆ ಎಲ್ಲವೂ ಇಂತಹ ವಿಚಾರಗಳ ಹತ್ತು ಹಲವು ಅಂಶಗಳನ್ನು ಪ್ರತಿಪಾದಿಸುತ್ತ ಸಾಗುತ್ತವೆ. ಪೌರ್ವಾತ್ಯ ಕಲೆಗಳ ಆರಂಭದಲ್ಲಿ ಮಾಡುವ ಆಚರಣೆಗಳನ್ನು ಗಮನಿಸಿದರೂ ಇದು ತಿಳಿಯುತ್ತದೆ. ಅವೆಲ್ಲ ಸರಿ ಸುಮಾರು ಒಂದೇ ರೀತಿಯಲ್ಲಿ ಆಚರಣೆಯಾಗುತ್ತವೆ. ತಾಳಮದ್ದಳೆ ಅಥವಾ ಯಕ್ಷಗಾನದಲ್ಲಿ ಭಾರತೀಯ ದರ್ಶನಶಾಸ್ತ್ರದ ವಿಚಾರವನ್ನು ಹಾಸ್ಯಗಾರನ ಪಾತ್ರವು ಪರಿಚಯಿಸಲು ಎಡೆಮಾಡಿಕೊಡುತ್ತದೆ. ಉದಾಹರಣೆಗೆ 'ಶ್ರೀ ಮಹಾವಿಷ್ಣುವು ಯೋಗ ನಿದ್ರೆಯಲ್ಲಿದ್ದಾರೆ...' ಎಂದು ಪ್ರಧಾನ ಪಾತ್ರಧಾರಿ ಹೇಳಿದರೆ, 'ಅವರಿಗೆ ಸ್ವಯ ಇಲ್ಲವಾ ಹಾಗಿದ್ದರೆ...' ಎಂದು ಹಾಸ್ಯಗಾರ ಕೇಳುತ್ತ ಎಲ್ಲರನ್ನೂ ನಗಿಸುತ್ತಾನೆ. ಹೀಗೆ ಪ್ರೇಕ್ಷಕನ ಆಲೋಚನೆಯ ಧಾಟಿಯನ್ನು ಹಿಡಿದು, ಅವನನ್ನು ಸತ್ವಯುತ ಆಲೋಚನೆಯ ಕಡೆಗೆ ಕರೆದೊಯ್ಯುವ ಸಲುವಾಗಿ ಹಾಸ್ಯಗಾರ ಹೇಳುವ ಈ ಮಾತುಗಳು ಮುಖ್ಯವಾದವು. ವೇದಾಂತ ಎಂಬ ಹೆಸರಿಲ್ಲದೆಯೇ ಅಲ್ಲಿ ವೇದಾಂತದ ಮಾತುಗಳು ನಸುಳುತ್ತವೆ.

◆ **ಯಕ್ಷಗಾನ ಕ್ಷೇತ್ರದಲ್ಲಿ ಹೀಗೆ ವಾಗ್ವಿಲಾಸ ಪ್ರದರ್ಶಿಸಬಲ್ಲ ಅರ್ಥದಾರಿಗಳು ಕಡಿಮೆಯಾಗುತ್ತಿದ್ದಾರೆಯೇ? ಅದಕ್ಕೇನು ಕ್ರಮ ತೆಗೆದುಕೊಳ್ಳಬಹುದು?**

ಹಾಗೇನಿಲ್ಲ. ಆಸಕ್ತರು ಹಲವಾರು ಮಂದಿ ಈ ಕ್ಷೇತ್ರಕ್ಕೆ ಬರುತ್ತಲೇ ಇದ್ದಾರೆ. ಆದರೆ ಯಕ್ಷಗಾನ ಕಲಿಕಾ ಕೇಂದ್ರಗಳಲ್ಲಿ ನೃತ್ಯ ಮತ್ತು ಸಂಗೀತವನ್ನು ತಜ್ಞರಿಂದ ಹೇಳಿಕೊಡುವ ವಾಡಿಕೆಯಿದೆ. ಅದೇ ರೀತಿ ಮಾತುಗಾರಿಕೆಯನ್ನೂ ಕಲಿಸಬೇಕಾದ ಅಗತ್ಯವಿದೆ. ಯಾಕೆಂದರೆ ಪ್ರಸಂಗ ಜ್ಞಾನದ ಜೊತೆಗೆ ಪುರಾಣ ಜ್ಞಾನವಿದ್ದಾಗ ಮಾತ್ರ ಮಾತುಗಾರಿಕೆಯನ್ನು ವಿಸ್ತರಿಸುವುದು ಸಾಧ್ಯವಾಗುತ್ತದೆ. ಪ್ರೇಕ್ಷಕರು ಕೂಡ ಔಚಿತ್ಯಪೂರ್ಣವಾದ ಹಿತಮಿತವಾಗಿ ಪ್ರಸಂಗವ್ಯಾಪ್ತಿಯೊಳಗೆ ಮಾಡುವ ವಾದ ಪ್ರತಿವಾದಗಳನ್ನು ಪ್ರೋತ್ಸಾಹಿಸುವರು. ಅದಕ್ಕಾಗಿ